Prajavani - 07-03-13

# ಚುಟುಕು ಗುಟುಕು

## ಸರ್ಕಾರಿ ನೌಕರರ ಕ್ರೀಡಾಕೂಟ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವು ಮಾರ್ಚ್ 12 ಮತ್ತು 13ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಭಾಗವಹಿಸಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ ಕ್ರೀಡಾ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಸಹಾಯಕ ನಿರ್ದೇಶಕರನ್ನು (ದೂರವಾಣಿ: 080–22239771) ಸಂಪರ್ಕಿಸಬಹುದು.

## ಕ್ರಿಕೆಟ್: ಇಂದು ಭಾರತ ತಂಡದ ಆಯ್ಕೆ

ನವದೆಹಲಿ: ಆಸ್ಟ್ರೇಲಿಯಾ ವಿರುದ್ಧದ ಇನ್ನುಳಿದ ಎರಡು ಟೆಸ್ಟ್ ಕ್ರಿಕೆಟ್ ಪಂದ್ಯಗಳಿಗೆ ಬಿಸಿಸಿಐ ಆಯ್ಕೆ ಸಮಿತಿ ಗುರುವಾರ ಭಾರತ ತಂಡವನ್ನು ಆಯ್ಕೆ ಮಾಡಲಿದೆ.

## ಟಿಟಿ: ಬಿಎನ್‌ಎಂಐಟಿ ಚಾಂಪಿಯನ್

ಬೆಂಗಳೂರು: ಬಿಎನ್‌ಎಂಐಟಿ ಪುರುಷರ ತಂಡದವರು ಆರ್.ವಿ. ಎಂಜಿನಿಯರಿಂಗ್ (ಆರ್‌ವಿಸಿಇ) ಕಾಲೇಜು ಆಶ್ರಯದಲ್ಲಿ ಇಲ್ಲಿ ನಡೆದ ದಕ್ಷಿಣ ವಲಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಫೈನಲ್ ಪಂದ್ಯದಲ್ಲಿ ಬಿಎನ್‌ಎಂಐಟಿ ತಂಡ 3–1ರಲ್ಲಿ ಆರ್‌ವಿಸಿಇ ಕಾಲೇಜು ಎದುರು ಗೆಲುವು ಸಾಧಿಸಿತು.

ಮಹಿಳಾ ವಿಭಾಗದ ಫೈನಲ್ ಹಣಾಹಣಿಯಲ್ಲಿ ಬಿಎನ್‌ಎಂಐಟಿ 3–1ರಲ್ಲಿ ಬಿಎಂಎಸ್‌ಸಿಇ ಎದುರು ಗೆಲುವು ಪಡೆದು ಪ್ರಶಸ್ತಿ ಗೆದ್ದುಕೊಂಡಿತು.

## ಗಾಲ್ಫ್: ಅಗ್ರಸ್ಥಾನದಲ್ಲಿ ಸ್ಮೃತಿ

ಮುಂಬೈ (ಪಿಟಿಐ): ಅನುಭವಿ ಸ್ಪರ್ಧಿ ಸ್ಮೃತಿ ಮೆಹ್ರಾ ಇಲ್ಲಿ ನಡೆಯುತ್ತಿರುವ 'ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್'ನ ನಾಲ್ಕನೇ ಲೆಗ್‌ನ ಟೂರ್ನಿಯ ಎರಡನೇ ಸುತ್ತಿನ ಬಳಿಕ ಅಗ್ರಸ್ಥಾನ ಪಡೆದಿದ್ದಾರೆ.

ಬುಧವಾರ ನಡೆದ ಎರಡನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅವರು 63 ಅವಕಾಶಗಳನ್ನು ತೆಗೆದುಕೊಂಡರು. ಈ ಮೂಲಕ ಒಟ್ಟು 130 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿದರು. ಮೊದಲ ಸುತ್ತಿನ ಬಳಿಕ ಮುನ್ನಡೆಯಲ್ಲಿದ್ದ ಶರ್ಮಿಳಾ ನಿಕೋಲೆಟ್ (131) ಎರಡನೇ ಸ್ಥಾನದಲ್ಲಿದ್ದಾರೆ. ಬೆಂಗಳೂರಿನ ಸ್ಪರ್ಧಿ ಬುಧವಾರ 68 ಅವಕಾಶಗಳಲ್ಲಿ ಸ್ಪರ್ಧೆ ಕೊನೆಗೊಳಿಸಿದರು.